ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 885/2021 CW: 2 P.W. 2

ಸಾಕ್ಷಿದಾರರ ಹೆಸರು ಃ ಜಯಮ್ಮಾ
ತಂದೆ/ಗಂಡನ ಹೆಸರು ಃ ಬಾಬು
ವಯಸ್ಸು ಃ 40 ವರ್ಷ
ವೃತ್ತಿ ಃ ವ್ಯವಸಾಯ
ವಾಸಸ್ಥಳ ಃ ಶೇರಖಾನ ಕೋಟೆ

**ಪ್ರಮಾಣೀಕರಿಸಲಾದ ದಿಃ 14.12.2022**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

ಒಂದು ವರ್ಷ ನಾನು, ಚಾಸಾ 3, 4, 5, 6 ಮತ್ತು ಮೃತ ಶಾಂತಮ್ಮಾ ಇದಿಐಲವಾರಪಲ್ಲಿಯ ಕೃಷ್ಣಪ್ಪಾ ರವರ ಜಮೀನಿನಲ್ಲಿ ಕೊತ್ತಂಬರಿ ಸೊಪ್ಪು ಕೀಳಲು ಹೋಗಿದ್ದೆಹಿ. 2 ಗಂಟೆ ವರೆಗೆ ಕೇಲಸ ಮಾಡಿದ್ದೆವು. ನಾವು 2 ಗಂಟೆಗೆ ಟಾಟಾ ಎ.ಸಿ ವಾಹನದಲ್ಲಿ ನಾವು ಶೇರಖಾನಕೋಟೆಗೆ ವಾಪಸ್ಸು ಹೊರಟೆವು. ಸದರಿ ವಾಹನವನ್ನು ರಾಮಚಂದ್ರಪ್ಪಾ ಚಲಾಯಿಸುತ್ತಿದ್ದರು.

2. ಸುಮಾರು 2.20 ಕ್ಕೆ ಶೇರಖಾನಪಲ್ಲಿಯ ರೆಡ್ಡಿ ಹೋಟಲ್ ಬಳಿ ಬರುತ್ತಿದ್ದಾಗ, ಆರೋಪಿಯು ಸದರಿ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ವಿಭಜನೆ ಕಿಡ್ಡಿ ಹೊಡಿಸಿ ಪಒಲ್ಟಿ ಕೆಡವಿರುತ್ತಾರೆ. ಪರಿಣಾಮವಾಗಿ ನಾವೆಲ್ಲರೂ ಹಕೆಳಗಡೆ

ಬಿದ್ದೆವು. ನನಗೆ ತಲೆಗೆ ಮುತ್ತ ಬೆನ್ನಿಗೆ ಏಟು ಬಿದ್ದಿರುತ್ತದೆ. ಶಾಂತಮ್ಮಾರವರಿಗೆ ತಲೆ ಒಡೆದುಹೋಗಿತ್ತು ಮತ್ತು ಮೂಗಿಗೆ ಗಾಯವಾಗಿತ್ತು, ಮೂಗಿನಲ್ಲಿ ರಕ್ತ ಬರುತ್ತಿತ್ತು ಉಳಿದವರಿಗೆ ಗಾಯಗಳಾಗಿದ್ದವು.

3. ನಂತರ ಶಾಂತಮ್ಮಾರವರನ್ನು ಬಾಗೇಪಲ್ಲಿ ಸ324, and ರ್ಕಾರಿ ಆಸ್ಪತ್ರೆಗೆ ಬಂದೆವು. ಶಾತಮ್ಮಾ ರವರನ್ನು ಹೆಚ್ಮಿ ನ ಚಿಕಿತ್ಸೆಗೆ ಚಿಕ್ಕಬಳ್ಳಾಪುರಕ್ಕೆ ಕರೆದುಕೊಂಡು ಬಂದು, ನಂತರ

ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಶಾಂತಮ್ಮಾ ರವರು ಮೃತ ಪಟ್ಟಿರುವುದಾಗಿ ವೈದ್ಯರು ದೃಢಪಡಿಸಿರುತ್ತಾರೆ. ನಾವು ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆವು. ಆ ದಿನ ಟಾಟಾ ಎ.ಸಿ ವಾಹನ ಚಲಾಯಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ.

4. ಟಾಟಾ ಎ.ಸಿ ವಾಹವನದ ಪೋಟೋವನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 3 ಮತ್ತು 4 ಎಂದು ಗುರುತಿಸಲಾಗಿದೆ. ಪೋಲೀಸರಿಗೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಟಾಟಾ ಎ.ಸಿ ವಾಹನದ ನಂ. ಕೆ ಎ ಬಿ 5577 ಎಂದರೆ. ಸರಿ. ಘಟನೆ ನಡೆದ ದಿನ ದಿಃ 15.08.2020 ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಕಾರಣ ಇಲ್ಲದೆ ಇದ್ದುದರಿಂದ ತಿರಸ್ಕರಿಸಲಾಯಿತು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ